**ದಿನಾಂಕಃ 02-01-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು .**

**ಮುಂದುವರೆದ ಪಾಟೀ ಸವಾಲುಃ 1(ಎ) ರಿಂದ (ಡಿ), 2 ರಿಂದ 6 ಮತ್ತು 8 ರಿಂದ 10 ನೇ ಪ್ರತಿವಾದಿಗಳ ಪರ ಶ್ರೀ.ಆರ್.ಡಿ.ಜಿ. ವಕೀಲರಿಂದಃ**

ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ನಿ.ಪಿ-8 ರ ಭಾರತ ಚುನಾವಣಾ ಆಯೋಗದವರು ನೀಡಿರುವ ಚಂದ್ರಪ್ಪ ರವರ ಗುರುತಿನ ಚೀಟಿಯಲ್ಲಿ ತಂದೆಯ ಹೆಸರನ್ನು ಪೋಮ್ಯಪ್ಪ ಎಂದು ನಮೂದಿಸಲಾಗಿದೆ ಆದರೆ ದತ್ತಕ ತಂದೆ ಪೋಮ್ಯಪ್ಪ ಎಂದು ನಮೂದಿಸಲಾಗಿರುವುದಿಲ್ಲ ಎಂದರೆ ಸರಿ.

ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ನಿ.ಪಿ-9 ರ ಭಾರತ ಚುನಾವಣಾ ಆಯೋಗದವರು ನೀಡಿರುವ ಚಂದ್ರಪ್ಪ ರವರ ಗುರುತಿನ ಚೀಟಿಯಲ್ಲಿ ತಂದೆಯ ಹೆಸರನ್ನು ಪೋಮ್ಯಪ್ಪ ಎಂದು ನಮೂದಿಸಲಾಗಿದೆ ಆದರೆ ದತ್ತಕ ತಂದೆ ಪೋಮ್ಯಪ್ಪ ಎಂದು ನಮೂದಿಸಲಾಗಿರುವುದಿಲ್ಲ ಎಂದರೆ ಸರಿ.

ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ನಿ.ಪಿ-10 ರ ಚುನಾವಣಾ ಪ್ರಮಾಣ ಪತ್ರದಲ್ಲಿ ಚಂದ್ರಪ್ಪ ರವರ ತಂದೆಯ ಹೆಸರನ್ನು

ಪೋಮ್ಯಪ್ಪ ಎಂದು ನಮೂದಿಸಲಾಗಿದೆ ಆದರೆ ದತ್ತಕ ತಂದೆ ಪೋಮ್ಯಪ್ಪ ಎಂದು ನಮೂದಿಸಲಾಗಿರುವುದಿಲ್ಲ ಎಂದರೆ ಸರಿ.

ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ನಿ.ಪಿ–11 ರ ಕರ್ನಾಟಕ ಸರ್ಕಾರದವರು ನೀಡಿರುವ ಎ.ಪಿ.ಎಲ್ ಪಡಿತರ ಚೀಟಿಯಲ್ಲಿ ಚಂದ್ಯಪ್ಪ ರವರ ತಂದೆಯ ಹೆಸರನ್ನು ಪೋಮ್ಯಪ್ಪ ಎಂದು ನಮೂದಿಸಲಾಗಿದೆ ಆದರೆ ದತ್ತಕ ತಂದೆ ಪೋಮ್ಯಪ್ಪ ಎಂದು ನಮೂದಿಸಲಾಗಿರುವುದಿಲ್ಲ ಎಂದರೆ ಸರಿ.

ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ನಿ.ಪಿ–7 ರ Pension Payment order ನಲ್ಲಿ ಚಂದ್ಯಪ್ಪ ರವರ ತಂದೆಯ ಹೆಸರನ್ನು ಪೋಮ್ಯಪ್ಪ ಎಂದು ಮಾತ್ರ ನಮೂದಿಸಲಾಗಿದೆ ಆದರೆ ದತ್ತಕ ತಂದೆ ಪೋಮ್ಯಪ್ಪ ಎಂದು ನಮೂದಿಸಲಾಗಿರುವುದಿಲ್ಲ ಎಂದರೆ ಸರಿ.

ನನ್ನ ತಂದೆ ಚಂದ್ಯಪ್ಪ ರವರು ಸದರಿ ಪೋಮ್ಯಪ್ಪ ರವರಿಗೆ ಒಂದು ವೇಳೆ ನಿಜವಾಗಿಯೂ ದತ್ತಕಕ್ಕೆ ಹೋಗಿದ್ದರೆ ಸದರಿ ಚಂದ್ಯಪ್ಪ ರವರಿಗೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳಲ್ಲಿ ಅವರ ತಂದೆಯ ಹೆಸರು ದತ್ತಕ

ತಂದೆ ಪೋಮ್ಯಪ್ಪ ಎಂದು ನಮೂಸಲಾಗುತ್ತಿತ್ತು ಆದರೆ ಸದರಿಯವರು ದತ್ತಕಕ್ಕೆ ಹೋಗಿರುವುದಿಲ್ಲ ಆ ಕಾರಣಕ್ಕಾಗಿ ತಂದೆಯ ಹೆಸರು ದತ್ತಕ ತಂದೆ ಎಂದು ಯಾವುದೇ ದಾಖಲೆಗಳಲ್ಲಿ ನಮೂದು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ನಿ.ಪಿ-6 ರ ನೊಂದಣಿ ದತ್ತಕ ಪತ್ರ-1952 ನೇ ಇಸವಿಯಲ್ಲಿ ನೊಂದಣಿಯಾದ ಸಮಯದಲ್ಲಿ ವಾಲಪ್ಪನಿಗೆ 11 ವರ್ಷ ವಯಸ್ಸು ಆಗಿತ್ತು ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ನಿ.ಪಿ-6 ರ ನೊಂದಣಿ ದತ್ತಕ ಪತ್ರ-1952 ನೇ ಇಸವಿಯಲ್ಲಿ ನೊಂದಣಿಯಾದ ಸಮಯದಲ್ಲಿ ಕಾಳಪ್ಪನಿಗೂ ಸಹ 12 ವರ್ಷ ವಯಸ್ಸು ಆಗಿತ್ತು ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ನಿ.ಪಿ-6 ರ ನೊಂದಣಿ ದತ್ತಕ ಪತ್ರ-1952 ನೇ ಇಸವಿಯಲ್ಲಿ ನೊಂದಣಿಯಾದ ಸಮಯದಲ್ಲಿ ನಾಗಪ್ಪನಿಗೂ ಸಹ 07 ವರ್ಷ ವಯಸ್ಸು ಆಗಿತ್ತು ಎಂದರೆ ಸರಿಯಲ್ಲ. ಸದರಿ ಕಾಳಪ್ಪನು ಸದರಿ ವಾಲಪ್ಪನಿಗಿಂತ ಹಿರಿಯವನು ಎಂದರೆ ಸರಿ. ಆ ಕಾರಣಕ್ಕಾಗಿ ಸದರಿ ವಾಲಪ್ಪನಿಗೆ ಸದರಿ ನಿ.ಪಿ-6 ರ

ನೊಂದಣಿ ದತ್ತಕ ಪತ್ರ-1952 ನೇ ಇಸವಿಯಲ್ಲಿ ನೊಂದಣಿಯಾದ ಸಮಯದಲ್ಲಿ ಸದರಿ ವಾಲಪ್ಪನಿಗೆ 13 ವರ್ಷ ವಯಸ್ಸು ಆಗಿತ್ತು ಎಂದರೆ ಸರಿಯಲ್ಲ. ನನ್ನ ತಂದೆ ಚಂಧ್ರಪ್ಪ ರವರಿಗೆ 9 ವರ್ಷ ವಯಸ್ಸು ಇದ್ದಾಗ ಸದರಿಯವರಿಗೆ ದತ್ತಕಕ್ಕೆ ತೆಗೆದು ಕೊಳ್ಳಲಾಗಿದೆ. ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ನಿ.ಪಿ-7 ರ Pension Payment Order ಪುಸ್ತಕದಲ್ಲಿ ನನ್ನ ತಂದೆ ಚಂಧ್ರಪ್ಪ ರವರ ಜನ್ಮ ದಿನಾಂಕವನ್ನು 25-09-1929 ಎಂದು ನಮೂದಿಸಲಾಗಿರುತ್ತದೆ. ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ನಿ.ಪಿ-7 ರ Pension Payment Order ನಲ್ಲಿ ನನ್ನ ತಂದೆ ಚಂಧ್ರಪ್ಪ ರವರ ಜನ್ಮ ದಿನಾಂಕವನ್ನು 1929 ಎಂದು ಉಲ್ಲೇಖಿಸಲಾಗಿರುತ್ತದೆ ಹಾಗು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ನೊಂದಣಿ ದತ್ತಕ ಪತ್ರ -1952 ನೇ ಇಸವಿಯಲ್ಲಿ ನೊಂದಣಿಯಾದ ಸಮಯದಲ್ಲಿ ನನ್ನ ತಂದೆ ಚಂಧ್ರಪ್ಪ ರವರಿಗೆ 23 ವರ್ಷ ವಯಸ್ಸು ಆಗಿತ್ತು ಎಂದರೆ ಸರಿಯಲ್ಲ. ನನ್ನ ಅಜ್ಜ ಪೋಮ್ಮಪ್ಪನೂ ಸಹ ರೈಲ್ವೆ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು ಎಂದರೆ ಸರಿಯಲ್ಲ. ನನ್ನ

ತಂದೆ ಚಂದ್ರಪ್ಪ ರವರು ರೈಲ್ವೆ ಇಲಾಖೆಯಲ್ಲಿ ಸೇವೆ ಸಲ್ಲಿಸಿದ್ದಾರೆ ಎಂದರೆ ಸರಿ. ಸದರಿ ಪೋಮ್ಯಪ್ಪ ರವರಿಗೆ ಸದರಿ ನಿ.ಪಿ-6 ರ ನೊಂದಣಿ ದತ್ತಕ ಪತ್ರ ನೊಂದಣಿಯಾದ ಸಮಯದಲ್ಲಿ ಸದರಿ ಪೋಮ್ಯಪ್ಪ ರವರಿಗೆ 4 ಜನ ಅಲ್ಪವಯಿ ಗಂಡು ಮಕ್ಕಳು ಇದ್ದರು ಆ ಕಾರಣಕ್ಕಾಗಿ ನನ್ನ ತಂದೆಯಾದ ಚಂದ್ರಪ್ಪ ರವರನ್ನು ರೈಲ್ವೆ ಇಲಾಖೆಯಲ್ಲಿ ಸೇವೆಗೊಸ್ಕರ ಭರ್ತಿ ಮಾಡಿಸುವ ಸಲುವಾಗಿಯೇ ನಿ.ಪಿ-6 ರ ನೊಂದಣಿ ದತ್ತಕ ಪತ್ರವನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನನ್ನ ತಂದೆ ಚಂದ್ರಪ್ಪ ರವರು ತನ್ನ ಜನಕ ತಂದೆಯಾದ ಸಂಗಪ್ಪ ರವರ ಬಳಿಯಿಂದ ಆಸ್ತಿಗಳಲ್ಲಿ ಯಾವುದೇ ಪಾಲು ಆಗಲೀ ಅಥವಾ ಹಿಸ್ಸೆಯನ್ನು ಪಡೆದು ಕೊಂಡಿರುವುದಿಲ್ಲ. 1986 ನೇ ಇಸವಿಯಲ್ಲಿ ನಾನು ಕೆ.ಇ.ಬಿ. ಇಲಾಖೆಯಲ್ಲಿ ಸೇವೆಗೆ ಭರ್ತಿಯಾಗಿದ್ದೇನೆ . 2013 ನೇ ಇಸವಿಯಲ್ಲಿ ನಾನು ನನ್ನ ಸೇವೆಯಿಂದ ನಿವೃತ್ತನಾಗಿದ್ದೇನೆ. 2014 ನೇ ಇಸವಿಯಲ್ಲಿ ನನ್ನ ತಂದೆಯಾದ ಚಂದ್ರಪ್ಪ ರವರು ಮರಣ ಹೊಂದಿದ್ದಾರೆ. ನನ್ನ ತಂದೆಯವರು ಮೊದಲಿನಿಂದಲೂ ಖಾತೆ ಬದಲಾವಣೆಗೊಸ್ಕರ ಕೇಳುತ್ತಾ ಬಂದಿದ್ದಾರೆ ನಂತರ 1986 ನೇ ಇಸವಿಯಲ್ಲಿ ನಾನು ಕೆ.ಇ.ಬಿ.

ಇಲಾಖೆಯಲ್ಲಿ ಸೇವೆಗೆ ಭರ್ತಿಯಾದ ನಂತರವೂ ಸಹ ಖಾತೆ ಬದಲಾವಣೆಗೊಸ್ಕರ ಕೇಳುತ್ತಾ ಬಂದಿದ್ದೇನೆ . ನಾನು ನೌಕರಿಗೆ ಸೇರಿದ ನಂತರ ಪ್ರತಿವಾದಿಗಳ ವಿರುದ್ಧ ಯಾವುದಾದರೂ ಕಾನೂನು ಕ್ರಮ ಜರುಗಿಸಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಸದರಿಯವರು ಹಿಸ್ಸೆ ಕೊಡುತ್ತೇನೆ ಎಂದು ಹೇಳಿದ್ದ ಕಾರಣಕ್ಕಾಗಿ ನಾನು ಯಾವುದೇ ಕಾನೂನು ಕ್ರಮ ಜರುಗಿಸಿರುವುದಿಲ್ಲ ಎಂದು ನುಡಿಯುತ್ತಾರೆ

ಮುಂದುವರೆದ ಪಾಟೀ ಸವಾಲಿಗೆ ಸಮಯ ಬೇಡಿರುವುದರಿಂದ ಮುಂದೂಡಲಾಗಿದೆ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.
Sd/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.